**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ</u>**

ದಿನಾಂಕಃ **05.02.2026**

**<u>ಸಿ.ಸಿ.ಸಂ.46/2025</u>**

ಫಿರ್ಯಾದಿಃ- ಶ್ರೀ. ಧರ್ಮ ಬಿನ್ ಚಿಕ್ಕಹೊನ್ನೇಗೌಡ,
ಸುಮಾರು 45 ವರ್ಷ,
ವಾಸಃ ಹಿರೇಮರಳಿ ಗ್ರಾಮ, ಕಸಬಾ ಹೋಬಳಿ,
ಪಾಂಡವಪುರ ತಾಲ್ಲೂಕು.

ಃ ವಿರುದ್ಧ ಃ

ಆರೋಪಿಃ- ಶ್ರೀ.ಮೋಹನ್ ಕುಮಾರ್ .ಎಸ್.ಬಿನ್
ಶ್ರೀನಿವಾಸ, ಸುಮಾರು 33 ವರ್ಷ,
ವಾಸಃ ಮಾರ್ಕೆಟ್ ಎದುರು ರಸ್ತೆ, ಹಾರೋಹಳ್ಳಿ ಗ್ರಾಮ,
ಪಾಂಡವಪುರ ಟೌನ್.

<u>ಆರೋಪಣೆ</u>

**ಶ್ರೀಮತಿ. ಪಾರ್ವತಮ್ಮ.ಬಿ., ಬಿ.ಎ., ಎಲ್.ಎಲ್.ಎಂ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಪಾಂಡವಪುರ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂಃ 251 ರಡಿಯಲ್ಲಿನ ಆರೋಪ</u>**

ಆರೋಪಿಯಾದ ನೀವು ಪಿರ್ಯಾದುದಾರರ ಕಡೆಯಿಂದ, ದಿನಾಂಕಃ 06.04.2024 ರಂದು ರೂ.4,90,000/- ಗಳ ಹಣವನ್ನು ಸಾಲವಾಗಿ ಪಡೆದಿದ್ದು, ಇದನ್ನು ತಿರುವಳಿ ಮಾಡುವ ಬಗ್ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಾಂಡವಪುರ ಶಾಖೆಗೆ ಸೇರಿದ, ರೂ.4,90,000/- ಗಳ ಚೆಕ್ ನಂಃ 280566 ರ ದಿನಾಂಕಃ06.06.2024 ರಂದು ಫಿರ್ಯಾದುದಾರರಿಗೆ ಕೊಟ್ಟಿದ್ದು, ಸದರಿ ಚೆಕ್ ನಲ್ಲಿನ ಹಣವನ್ನು ಪಡೆಯುವ ಬಗ್ಗೆ ಫಿರ್ಯಾದುದಾರರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಾಂಡವಪುರ ಶಾಖೆಗೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ "Fund insufficient" ಎನ್ನುವ ಕಾರಣದಿಂದ ಸದರಿ ಚೆಕ್ ಅಮಾನ್ಯಗೊಂಡಿದ್ದು, ತದನಂತರ 30 ದಿನಗಳ ಒಳಗಾಗಿ ಪಿರ್ಯಾದುದಾರರು ಆರೋಪಿಯಾದ ನೀಮಗೆ ದಿನಾಂಕ:14.06.2024 ರಂದು

ನೋಟೀಸ್ ನೀಡಿದ್ದು, ಸದರಿ ನೋಟಿಸ್ ಅನ್ನು ಆರೋಪಿಯಾದ ನೀವು ತೆಗೆದುಕೊಳ್ಳದ ಕಾರಣ ದಿನಾಂಕಃ 18.06.2024 ರಂದು Unclaimed ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿರುತ್ತದೆ. ಆರೋಪಿಯಾದ ನೀವು ಪಿರ್ಯಾದುದಾರರ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮ ಕಾಯ್ದೆ-138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆ: **1** ಃ ಈಗ ನಿಮಗೆ ಓದಿ ಹೇಳಿದ ಆರೋಪದ ಸಾರಾಂಶ ತಿಳಿಯಿತೇ **?**
ಉತ್ತರಃ

ಪ್ರಶ್ನೆ: **2**ಃ ಈಗ ನೀನು ಓದಿಸಿಕೊಂಡು ತಿಳಿದ ಆರೋಪಕ್ಕೆ ತಪ್ಪೊಪ್ಪುವೆಯೋ ಅಥವಾ ಅಧಿವಿಚಾರಣೆಯಾಗಲೀ ಎನ್ನುವೆಯೋ **?**

ಉತ್ತರಃ

**(**ಆರೋಪಿತನ ಯಥಾವತ್ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯ್ತು**.)**

**(ಪಾರ್ವತಮ್ಮ.ಬಿ.)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ನ್ಯಾಯಾಲಯ, ಪಾಂಡವಪುರ.**

ಆರೋಪಿ ಸಹಿಃ